# ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಗಿದೆ ಸೇವಾ ಪರತೆ

## ರಾಜ್ಯಸಭಾ ಮಾಜಿ ಸದಸ್ಯ ಡಾ.ಪಿ.ಸೆಲ್ವಿದಾಸ್ ಅವರಿಂದ ಆಸ್ಪತ್ರೆಯ ಬಗ್ಗೆ ಮೆಚ್ಚುಗೆಯ ಮಾತು



ಮೈಸೂರು,ಮೇ ೮– ನಗರದ ಚಾಮುಂಡಿಬೆಟ್ಟದ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯು ರೋಗಿ ಪರ ಹಾಗೂ ಸೇವಾ ಪರತೆ ಎಂಬ ಪದಗಳನ್ನು ಅಕ್ಷರಶಃ ಸಾಧಿಸಿದೆ. ಇದನ್ನು ಸ್ವತಃ ನಾನು ಒಬ್ಬ ರೋಗಿಯಾಗಿ ಅಲ್ಲಿ ಚಿಕಿತ್ಸೆ ಪಡೆದು ಗುಣಮುಖವಾಗಿರುವುದೇ ಸಾಕ್ಷಿ ಎಂದು ರಾಜ್ಯ ಸಭಾ ಮಾಜಿ ಸದಸ್ಯರೂ ಆದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಪಿ.ಸೆಲ್ವಿದಾಸ್ ಹೇಳಿದ್ದಾರೆ.

೧೯೮೮ರಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಮುಖ್ಯಸ್ಥರಾಗಿದ್ದಾಗಿನಿಂದಲೂ ಜೆಎಸ್‌ಎಸ್ ಸಂಸ್ಥೆಯ ಒಡನಾಟ ನನಗಿತ್ತು. ಆದರೂ ೨೦೧೬ರಲ್ಲಿ ಮೈಸೂರು ವಿವಿಯ ಶತಮಾನೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ಸಮ್ಮುಖದಲ್ಲಿ ನನಗೆ ಸನ್ಮಾನ ಇತ್ತು. ಆಗ ಜೆಎಸ್‌ಎಸ್ ಸಂಸ್ಥೆಯ ಇಂದಿನ ಮುಖ್ಯಸ್ಥರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿಯಾಗುವ ಅವಕಾಶ ಲಭಿಸಿತು. ನನಗೆ ಮೊಣಕಾಲಿನಲ್ಲಿ ನೋವು ಇದ್ದುದರಿಂದ ನಾನು ಸರಿಯಾಗಿ ನಡೆಯಲಾಗುತ್ತಿರಲಿಲ್ಲ. ಅದನ್ನು ಗಮನಿಸಿದ ಸ್ವಾಮೀಜಿ, ನಮ್ಮ ಆಯುರ್ವೇದ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯುವಂತೆ ಸಲಹೆ ನೀಡಿದರು.

ಹಾಗಾಗಿ ನಾನು ೨೦೧೭ರ ಏ.೧೬ರಂದು ಆಸ್ಪತ್ರೆಗೆ ತೆರಳಿದೆ. ಕಾರಿನಿಂದ ಇಳಿಯುವಾಗ ಗಾಲಿಕುರ್ಚಿ ತಂದರು. ನನ್ನ ಕಾರಿನ ಚಾಲಕ ಮತ್ತು ಆಸ್ಪತ್ರೆಯ ಇನ್ನೊಬ್ಬರು ಬಂದು ಆ ಕುರ್ಚಿಯಲ್ಲಿ ನನ್ನನ್ನು ಕೂರಿಸಿ ಅಲ್ಲಿನ ವಿಐಪಿ ವಾರ್ಡ್‌ಗೆ ಕರೆದೊಯ್ದರು. ಆ ಇನ್ನೊಬ್ಬ ವ್ಯಕ್ತಿಯೇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಶಿವಪ್ರಸಾದ್ ಹುಡೇದ ಎಂದು ತಿಳಿದು ನಾನು ಬೆರಗಾದೆ. ಏ.೧೭ರಿಂದ ನನಗೆ ಚಿಕಿತ್ಸೆ ಶುರು ಮಾಡಿದರು. ಹುಡೇದ ಅವರು ಇತರ ಸಹಾಯಕರೊಂದಿಗೆ ಇದ್ದು ನನಗೆ ಚಿಕಿತ್ಸೆ ನೀಡಿದರು.

### ೫ ದಿನದಲ್ಲಿ ನೋವು ಮಾಯವಾಗಿತ್ತು



ಈ ಆಸ್ಪತ್ರೆಯಲ್ಲಿ ಕಷಾಯವೊಂದನ್ನು ಐದು ದಿನಗಳ ಕಾಲ ಕುಡಿಯಲು ನೀಡಿದರು. ಅಚ್ಚರಿಯೆಂಬಂತೆ ನನ್ನ ಆರೋಗ್ಯ ಸುಧಾರಣೆ ಕಂಡಿತು. ಇತರ ವೈದ್ಯರು, ಶುಶ್ರೂಷಕಿಯರು, ಶುಶ್ರೂಷಕರು, ಥೆರಪಿ ಮಾಡುವವರು ಎಲ್ಲರೂ ಅಷ್ಟೇ ಪ್ರೀತಿಯಿಂದ ನನಗೆ ಚಿಕಿತ್ಸೆ ನೀಡಿದರು. ಐದು ದಿನಗಳ ಕಳೆಯುವ ಹೊತ್ತಿಗೆ ನೋವು ಮಾಯವಾಗಿತ್ತು.

–ಡಾ.ಪಿ.ಸೆಲ್ವಿದಾಸ್

ಅಲ್ಲದೆ, ಆಸ್ಪತ್ರೆಯ ಸ್ವಚ್ಛ ವಾತಾವರಣ, ಪ್ರವೇಶ ದ್ವಾರದ ಬಳಿ ಇರುವ ಧನ್ವಂತರಿ ಪ್ರತಿಮೆ ಎಲ್ಲವೂ ಗಮನಾರ್ಹವಾಗಿದ್ದವು. ಮೊದಲೆರಡು ದಿನ ಬಾಹ್ಯ ಚಿಕಿತ್ಸೆ ದೊರೆಯಿತು. ಹಿಂದೆ ಅಲೋಪತಿ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದಾಗ ಹಲವು ವೈದ್ಯರು ಇದು ತೀರಾ ಗಂಭೀರ ಸಮಸ್ಯೆ ಎಂದು ಹೇಳಿದ್ದರು. ಆದರೆ, ಈ ಆಸ್ಪತ್ರೆಯಲ್ಲಿ ಕಷಾಯವೊಂದನ್ನು ಐದು ದಿನಗಳ ಕಾಲ ಕುಡಿಯಲು ನೀಡಿದರು. ಅಚ್ಚರಿಯೆಂಬಂತೆ ನನ್ನ ಆರೋಗ್ಯ ಸುಧಾರಣೆ ಕಂಡಿತು. ಈ ಕಷಾಯವನ್ನು ತಯಾರಿಸಲು ಅಗತ್ಯ ಔಷಧೀಯ ಸಸ್ಯಗಳನ್ನು ಸ್ವತಃ ಹುಡೇದ ಅವರೇ ಆಸ್ಪತ್ರೆಯ ಆವರಣದವರೆಗೆ ಹೋಗಿ ತರುತ್ತಿದ್ದುದು. ಅವರ ಚಿಕಿತ್ಸೆಯಲ್ಲಿರುವ ಕಾಳಜಿ, ಕಕ್ಕುಲತೆಯನ್ನು ತೋರಿಸಿತ್ತು ಎಂದು ಅವರು ಸ್ಮರಿಸಿದ್ದಾರೆ. ಇತರ ವೈದ್ಯರು, ಶುಶ್ರೂಷಕಿಯರು, ಶುಶ್ರೂಷಕರು, ಥೆರಪಿ ಮಾಡುವವರು ಎಲ್ಲರೂ ಅಷ್ಟೇ ಪ್ರೀತಿಯಿಂದ ನನಗೆ ಚಿಕಿತ್ಸೆ ನೀಡಿದರು. ಐದು ದಿನಗಳ ಕಳೆಯುವ ಹೊತ್ತಿಗೆ ನೋವು ಮಾಯವಾಗಿತ್ತು ಎಂದು ಅವರು ತಿಳಿಸಿದಾರೆ.

ಎಷ್ಟೋ ಜನರಿಗೆ ಈ ಆಸ್ಪತ್ರೆಯ ಬಗ್ಗೆ ಅರಿವೇ ಇರುವುದಿಲ್ಲ. ಮಾಧ್ಯಮಗಳು ಇಂತಹ ಸೇವಾಪರ ಆಸ್ಪತ್ರೆಗಳನ್ನು ಉಪೇಕ್ಷಿಸುತ್ತಿವೆ ಎನಿಸುತ್ತದೆ. ಇಲ್ಲಿ ಸಂಧಿವಾತ, ಮೊಣಕಾಲು ನೋವು, ಬೆನ್ನುನೋವು, ಮೂತ್ರಪಿಂಡ ಸಮಸ್ಯೆಗಳಿಗೂ ಅತ್ಯುತ್ತಮ ಚಿಕಿತ್ಸೆ ದೊರೆಯುತ್ತದೆ. ಚಿಕಿತ್ಸಾ ವೆಚ್ಚ ಕೂಡ ಇತರೆ ಖಾಸಗಿ ಆಸ್ಪತ್ರೆಗಳಿಗಿಂತ ಕಡಿಮೆ ಇದೆ ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ ಎಂದು ಸೆಲ್ವಿದಾಸ್ ಹೇಳಿದ್ದಾರೆ.